ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 14-12-1978.

# *ವಿಘ್ನಗಳಿಂದ ಮುಕ್ತರಾಗುವ ಸಹಜಯುಕ್ತಿ.*

(विघ्नों से मुक्त होने की सहज युक्ति)

**ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.**

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

- ನಾನಾತ್ಮ ಆನಂದ ಸ್ವರೂಪ ಶಿವಪರಮಾತ್ಮನನ್ನ ತಂದೆ.
- ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.
- ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.
- ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

**ಸರ್ವರ ಮುಕ್ತಿ, ಜೀವನ್ ಮುಕ್ತಿ ದಾತ ಶಿವ ಬಾಬಾ ತನ್ನ ಮುದ್ದಿನ ಮಕ್ಕಳೊಂದಿಗೆ ಮಾತನಾಡುತ್ತಿದ್ದಾರೆ.**

ಬಾಪ್‌ದಾದಾ ಸದಾ ನಮ್ಮ ಬಹಳ ಕಾಲದಿಂದ ಅಗಲಿಹೋಗಿದ್ದು ಮತ್ತೆ ಸಿಕ್ಕಿರುವ ಪ್ರೀತಿಯ ಮಕ್ಕಳನ್ನು ಸ್ನೇಹದ ದೃಷ್ಟಿಯಿಂದ, ನಮ್ಮ ಸರ್ವ ಶ್ರೇಷ್ಠ ಶಿರೋಕಿರೀಟರಾದ ಮಕ್ಕಳನ್ನು ಅದೇ ಪದಮಾಪದಂ ಭಾಗ್ಯಶಾಲೀರೂಪದಲ್ಲಿ ನೋಡುತ್ತಾ ಕಲ್ಪದ ಹಿಂದಿನ ಅಗಲಿಹೋಗಿದ್ದ ಮಕ್ಕಳು ಎಷ್ಟು ಉತ್ತಮ ಪದವಿಯನ್ನು ಪಡೆಯಲು ಯೋಗ್ಯರಾಗಿದ್ದಾರೆ ಎಂದು ಸದಾ ಸಂತೋಷ ಪಡುತ್ತಾರೆ. ಪ್ರತಿಯೊಬ್ಬರ ಯೋಗ್ಯತೆ ಹಾಗೂ ಪ್ರತಿಯೊಬ್ಬರ ವಿಶೇಷತೆಯು ಬಾಪ್‌ದಾದಾರವರ ಮುಂದೆ ಸದಾ ಸ್ಪಷ್ಟವಾಗಿದೆ. ಹಾಗೂ ಬಾಪ್‌ದಾದಾರವರು ಪ್ರತಿಯೊಬ್ಬ ಮಗುವಿನ ವಿಶೇಷತೆಯ ಮೌಲ್ಯವನ್ನು ಅರಿತುಕೊಂಡು ಪ್ರತಿಯೊಬ್ಬರನ್ನೂ ಅಮೂಲ್ಯ ರತ್ನವೆಂದು ತಿಳಿದುಕೊಳ್ಳುತ್ತಾರೆ. ಸದಾ ಬಾಪ್‌ದಾದಾರವರ ಸ್ಮೃತಿಸ್ವರೂಪ, ಸದಾ ಸಹಯೋಗಿ ಮಕ್ಕಳು, ವಿವಿಧ ಮೌಲ್ಯವುಳ್ಳ ರತ್ನಗಳ ಜೊತೆಯಲ್ಲಿಯೇ ಬಾಪ್‌ದಾದಾ ಸದಾ ಇರುತ್ತಾರೆ. ಎಂತಹ ಅಮೂಲ್ಯ ರತ್ನಗಳೆಂದರೆ ತಂದೆಯು ಅವರನ್ನು ತಮ್ಮ ಕೊರಳಿನ ಹಾರವನ್ನಾಗಿ ಮಾಡಿಕೊಂಡಿದ್ದಾರೆ, ಹೃದಯ ಸಿಂಹಾಸನಾಧಿಕಾರಿಗಳಾಗಿ, ನಯನ ನಕ್ಷತ್ರಗಳಾಗಿ, ಶಿರೋಕಿರೀಟಗಳಾಗಿ ಮಾಡಿಕೊಂಡಿದ್ದಾರೆ. ವಿಶ್ವದಲ್ಲಿ ತಮ್ಮ ಜೊತೆ ಜೊತೆಗೆ ಪೂಜ್ಯರನ್ನಾಗಿ ತಯಾರು ಮಾಡಿದ್ದಾರೆ. ಅನೇಕ ಭಕ್ತರ ಇಷ್ಟದೇವತೆಗಳನ್ನಾಗಿ ಮಾಡಿದ್ದಾರೆ. ಇಂತಹ ಸ್ವಮಾನದಲ್ಲಿ ಸದಾ ಸ್ಥಿತರಾಗಿರುತ್ತೀರಾ? ಯಾವ ದೃಷ್ಟಿಯಿಂದ ಬಾಪ್‌ದಾದಾ ನೋಡುತ್ತಾರೆಯೋ ಅಥವಾ ವಿಶ್ವವು ನೋಡುತ್ತದೆಯೋ ಅದೇ ಸ್ಥಿತಿಯಲ್ಲಿ ಸದಾ ಸ್ಥಿತರಾಗಿರುತ್ತೀರಾ?

ಇಂದು ತಂದೆ ಹಾಗೂ ದಾದಾ ಇಬ್ಬರ ಆತ್ಮಿಕ ಸಂಭಾಷಣೆಯು ಮಕ್ಕಳ ಬಗ್ಗೆ ನಡೆಯುತ್ತಾ ಇತ್ತು. ಸಹ-ಯೋಗಿ ಮಕ್ಕಳು ರಾಜಋಷಿ ಮಕ್ಕಳು ನಡೆಯುತ್ತಾ ನಡೆಯುತ್ತಾ ತೀವ್ರಗತಿಗೆ ಬದಲಾಗಿ ಒಮ್ಮೊಮ್ಮೆ ನಿಂತುಬಿಡುತ್ತೀರಿ. ಏಕೆ ನಿಂತುಬಿಡುತ್ತೀರಿ? ನಿಮ್ಮ

ಜೀವನದ ಭವಿಷ್ಯ ಶ್ರೇಷ್ಠ ಗುರಿ ಸ್ಪಷ್ಟವಾಗಿ ಕಂಡು ಬರುವುದಿಲ್ಲ. ಮುಂದೆ ಏನು ನಡೆಯುವುದೋ ಈ ಪ್ರಶ್ನೆಯ ಪರೀಕ್ಷೆಯು ನಿಮ್ಮ ಮುಂದೆ ಬರುತ್ತದೆ. ಈ ಕಾರಣದಿಂದ ತೀವ್ರಗತಿ ಅಥವಾ ತೀವ್ರ ಪುರುಷಾರ್ಥಕ್ಕೆ ಬದಲಾಗಿ ಪುರುಷಾರ್ಥದ ರೂಪ ತಳೆದುಬಿಡುತ್ತದೆ. ಬಂದಿರುವ ಅಡ್ಡಿಯನ್ನು ನಿವಾರಿಸಿಕೊಳ್ಳಲು ಅಥವಾ ಬಂಡೆಯನ್ನು ದಾಟಿ ಹೋಗುವ ಧೈರ್ಯವು ಕಡಿಮೆ ಆಗಿಬಿಡುತ್ತದೆ. ಆದ್ದರಿಂದ ನಡೆಯುತ್ತಾ ನಡೆಯುತ್ತಾ ಬಳಲಿ ಹೋಗುತ್ತೀರಿ. ಒಬ್ಬೊಬ್ಬರು ಬಸವಳಿದು ಬಿಡುತ್ತಾರೆ, ಒಬ್ಬೊಬ್ಬರು ಹತಾಶರಾಗಿ ಬಿಡುತ್ತಾರೆ. ಎಂದರೆ ತಮ್ಮಲ್ಲಿಯೇ ಭರವಸೆ ಇಲ್ಲದವರಾಗಿ ಬಿಡುತ್ತಾರೆ. ಇಂತಹ ಸಮಯದಲ್ಲಿ ತಂದೆಯ ಆಧಾರವು ದೊರೆತರೂ ಕೂಡ ತಮ್ಮನ್ನು ನಿರಾಧಾರರೆಂದು ಅನುಭವ ಮಾಡುತ್ತಾರೆ. ಆದರೆ ಬಾಪ್‌ದಾದಾ ಒಂದು ಸೆಕೆಂಡ್‌ನ ಸಹಜ ಸಾಧನ ಅಥವಾ ಯಾವುದೇ ವಿಘ್ನದಿಂದ ಬಿಡುಗಡೆ ಆಗುವ ವಿದ್ಯೆಯನ್ನು ಸಮಯ ಪ್ರತಿ ಸಮಯ ಯಾವ ಯುಕ್ತಿಗಳನ್ನು ತಿಳಿಸಿದ್ದಾರೆಯೋ ಅದನ್ನು ಮರೆತುಬಿಡುತ್ತೀರಿ. **ಕ್ಷಣದಲ್ಲಿ ಸ್ವಯಂನ ಸ್ವರೂಪ ಎಂದರೆ ಆತ್ಮಿಕ ಜ್ಯೋತಿಸ್ವರೂಪ ಹಾಗೂ ಕರ್ಮದಲ್ಲಿ ನಿಮಿತ್ತಭಾವದ ಸ್ವರೂಪ. ಈ ಡಬಲ್ ಲೈಟ್ ಸ್ವರೂಪವು ಒಂದು ಸೆಕೆಂಡ್‌ನಲ್ಲಿ ಹೈಜಂಪ್ ಮಾಡಿಸುವುದಾಗಿದೆ.** ಆದರೆ ಮಕ್ಕಳು ಏನು ಮಾಡುತ್ತೀರಿ? ಹೈಜಂಪ್ ನ ಬದಲಾಗಿ ಬಂಡೆಯನ್ನು ಒಡೆಯಲು ಪ್ರಾರಂಭ ಮಾಡುತ್ತೀರಿ. ಅದನ್ನು ಬದಿಗೆ ಸರಿಸಲು ಪ್ರಯತ್ನಿಸುತ್ತೀರಿ. ಈ ಕಾರಣದಿಂದ ಯಥಾಶಕ್ತಿ ಏನು ಧೈರ್ಯ ಹಾಗೂ ಉಲ್ಲಾಸ ಇದೆಯೋ ಅದನ್ನು ಈ ಪ್ರಯತ್ನದಲ್ಲಿಯೇ ಕೊನೆ ಮಾಡಿಬಿಡುತ್ತೀರಿ. ಯಾವಾಗ ಇಂತಹ ಮಕ್ಕಳ ಶ್ರಮವನ್ನು ನೋಡುತ್ತೇವೋ ಆಗ ಬಾಪ್‌ದಾದಾರವರಿಗೂ ಸಹ ಕನಿಕರ ಬರುತ್ತದೆ. ಹೈಜಂಪ್ ಮಾಡಿರಿ ಹಾಗೂ ಒಂದು ಸೆಕೆಂಡ್‌ನಲ್ಲಿ ಪಾರಾಗಿಬಿಡಿ ಎಂದು ಹೇಳಿರುವುದನ್ನು ಮರೆತುಬಿಡುತ್ತೀರಿ. ಬಾಪ್‌ದಾದಾ ಏನು ಹೇಳುತ್ತಾರೆ. ಹಾಗೂ ಮಕ್ಕಳು ಏನು ಮಾಡುತ್ತೀರಿ ಎನ್ನುವುದರ ಬಗ್ಗೆ ಅತ್ಮಿಕ ಸಂಭಾಷಣೆ ನಡೆಯಿತು. ಮಕ್ಕಳು ಏನು ನೋಡುತ್ತಿದ್ದಾರೆ ಮತ್ತು ಬಾಪ್‌ದಾದಾ ಏನು ಹೇಳುತ್ತಿದ್ದಾರೆ, ಸಣ್ಣ ವಿಸ್ಮೃತಿಯ ಕಾರಣದಿಂದ ಎಷ್ಟು ಕಷ್ಟಮಾಡಿಕೊಂಡು ಬಿಡುತ್ತೀರಿ ಎಂದರೆ ಸ್ವಯಂ ನೀವೇ ಆಯಾಸ ಪಡುತ್ತಿದ್ದೀರಿ.

ಮತ್ತೆ ಇನ್ನೇನು ಮಾಡುತ್ತೀರಿ? ವ್ಯರ್ಥ ಸಂಕಲ್ಪಗಳ ಬಿರುಗಾಳಿಯನ್ನು ಸ್ವಯಂ ನೀವೇ ರಚಿಸುತ್ತೀರಿ ಹಾಗೂ ಅದೇ ಬಿರುಗಾಳಿಯಲ್ಲಿ ಸ್ವಯಂ ನೀವೇ ಅಲುಗಾಡುತ್ತೀರಿ. ನಿಮ್ಮ ನಿಶ್ಚಯದ ಬುನಾದಿ ಅಥವಾ ಅನೇಕ ಪ್ರಕಾರದ ಪ್ರಾಪ್ತಿಗಳ ಆಧಾರದಲ್ಲಿ ಸ್ವಯಂ ನೀವೇ ಅಲುಗಾಡಿಬಿಡುತ್ತೀರಿ. ವಿನಾಶ ಆಗುವುದೋ ಇಲ್ಲವೋ ಗೊತ್ತಿಲ್ಲ, ಭಗವಾನುವಾಚ ಎನ್ನುವುದು ಸರಿಯೋ ಅಲ್ಲವೋ, ಪ್ರಪಂಚದ ಮುಂದೆ ನಿಶ್ಚಯದಿಂದ ಹೇಳೋಣವೋ ಅಥವಾ ಬೇಡವೋ, ಗುಪ್ತವಾಗಿರಲೊ ಅಥವಾ ಪ್ರತ್ಯಕ್ಷ ಆಗೋಣವೋ, ಸಂಗ್ರಹ ಮಾಡೋಣವೋ ಅಥವಾ ಸೇವೆಯಲ್ಲಿ ವಿನಿಯೋಗಿಸೋಣವೋ, ಪ್ರವೃತ್ತಿಯನ್ನು ಪಾಲನೆ ಮಾಡೋಣವೋ ಅಥವಾ ಸೇವೆಯಲ್ಲಿ ತೊಡಗೋಣವೋ ಕೊನೆಗೂ ಏನಾಗುವುದೋ, ತಂದೆಯಂತೂ ನಿರಾಕಾರ ಹಾಗೂ ಆಕಾರ, ಆಗಿದ್ದಾರೆ. ಆದರೆ ಸಾಕಾರದಲ್ಲಿ ಎದುರಿಸುವವರು ನಾವೇ ಆಗಿದ್ದೇವೆ ಎನ್ನುವ ವ್ಯರ್ಥ ಸಂಕಲ್ಪಗಳ ಬಿರುಗಾಳಿಯನ್ನು ರಚಿಸಿ ಸ್ವಯಂ ನಿಮ್ಮನ್ನೇ ಅಲ್ಲಾಡುವಂತೆ ಮಾಡಿಕೊಳ್ಳುತ್ತೀರಿ. ನಿಮ್ಮ ನಿಶ್ಚಯದ ಬುನಾದಿಯನ್ನು ಅಲುಗಾಡಿಸುತ್ತೀರಿ. ಹೇಗೆ ಬಿರುಗಾಳಿಯು ಎಲ್ಲಿಂದ ಎಲ್ಲಿಗೋ ತಲುಪಿಸಿ ಬಿಡುತ್ತದೆಯೋ ಹಾಗೆಯೇ ಈ ವ್ಯರ್ಥಸಂಕಲ್ಪಗಳ ಬಿರುಗಾಳಿಯು ನಿಮ್ಮ ತೀವ್ರಪುರುಷಾರ್ಥದಿಂದ ಪುರುಷಾರ್ಥದ ಕಡೆಗೆ ತೆಗೆದುಕೊಂಡು ಹೋಗುತ್ತದೆ. ಅಂತಹ ಬಿರುಗಾಳಿಗಳಲ್ಲಿ ಬರಬೇಡಿರಿ. ಬಾಪ್‌ದಾದಾ ಇನ್ನೂ ನಿಮಿತ್ತ ಮಾತ್ರರಾಗಿದ್ದೀರೋ ಅಥವಾ ಗೃಹಸ್ಥರಾಗಿದ್ದೀರೋ ಎಂದು ಮಕ್ಕಳನ್ನು ಕೇಳುತ್ತಿದ್ದಾರೆ. ಧರ್ಮದರ್ಶಿ ಆಗಿದ್ದರೆ ಜವಾಬ್ದಾರರು ಯಾರು? ನೀವೋ ಅಥವಾ ತಂದೆಯೋ? ತಂದೆಯು ಜವಾಬ್ದಾರ ಆಗಿರುವಾಗ ಆಗುವುದೋ ಇಲ್ಲವೋ, ಏನಾಗುವುದೋ ಎಂದು ಹೇಳುವುದು ತಂದೆಯ ಜವಾಬ್ದಾರಿಯನ್ನು ಸಿದ್ಧ ಮಾಡುತ್ತದೆಯೋ ಅಥವಾ ನಿಮ್ಮ ಜವಾಬ್ದಾರಿಯೋ? ನಿಶ್ಚಯ ಬುದ್ಧಿಯವರ ಮೊದಲನೆಯ ಲಕ್ಷಣ ಏನಾಗಿರುತ್ತದೆ? ನಿಶ್ಚಯಬುದ್ಧಿ ಎಂದರೆ ಸದಾ ನಿಶ್ಚಿಂತರು. ತಂದೆಯು ನಿಮ್ಮ ಎಲ್ಲಾ ಚಿಂತನೆಗಳನ್ನೂ ತಾನು ವಹಿಸಿಕೊಂಡ ಮೇಲೆ ನೀವು ಏಕೆ ಚಿಂತೆ ಮಾಡುತ್ತೀರಿ. ವಿನಾಶ ಆಗಲಿ ಅಥವಾ ಬಿಡಲಿ ಅಥವಾ ಯಾವಾಗ ಆಗುವುದೋ ಎನ್ನುವ ಚಿಂತೆಯು ಬ್ರಾಹ್ಮಣ ಜೀವನದಲ್ಲಿ ಏಕೆ ಇರಬೇಕು? ವಜ್ರಸಮಾನ ಜೀವನ, ತಂದೆಯೊಂದಿಗೆ ಮಿಲನ ಮಾಡುವ ಜೀವನ, ಉನ್ನತ ಕಲೆಯ ಜೀವನ, ಸರ್ವ ಖಜಾನೆಗಳಿಂದ ಸಂಪನ್ನವಾಗುವ ಜೀವನ, ಸರ್ವ ಅನುಭೂತಿಗಳಿಂದ ಸಂಪನ್ನ ಜೀವನ ಆಗಿರುವ ಬ್ರಾಹ್ಮಣ ಜೀವನವು ನಿಮಗೆ

ಒಳಿತೆನಿಸುವುದಿಲ್ಲವೇ. ಬೇಗ ಸಮಾಪ್ತಿ ಮಾಡಲು ಬಯಸುತ್ತೀರಾ? ಏನಾದರೂ ಕಷ್ಟ ಅಥವಾ ತೊಂದರೆ ಇದೆಯೇ, ಈ ಅತೀಂದ್ರಿಯ ಸುಖದ ಜೀವನವು ಒಂದರಿಂದ ನಾಲ್ಕು ಆಗಿಬಿಡಲಿ ಎಂದು ಭಕ್ತಿಮಾರ್ಗದಲ್ಲಿ ಮೊರೆಯಿಟ್ಟಿದ್ದೀರಿ. ಆದರೆ ಈಗ ಬಳಲಿ ಹೋಗಿದ್ದೀರಿ. ಇಂತಹ ಸಂಕಲ್ಪ ಮಾಡುವವರ ಮೇಲೆ ಬಾಪ್‌ದಾದಾರವರಿಗೆ ನಗು ಬರುತ್ತದೆ. ಇಂತಹ ಸಂಕಲ್ಪವನ್ನು ಮಾಡಲು ಪ್ರಾಪ್ತಿ ಇಲ್ಲದಿರುವುದು ಏನಿದೆ? ತಂದೆಯನ್ನು ಕಲ್ಯಾಣಕಾರಿ ಎಂದು ಕರೆಯುತ್ತೀರಿ ಹಾಗೂ ಕಲ್ಯಾಣಕಾರೀ ಜೀವನವೆಂದು ಹೇಳಿಕೊಂಡ ಮೇಲೆ ಭಗವಾನುವಾಚ ಏನು ಇದೆಯೋ ಅದರಲ್ಲಿ ಅನೇಕ ಪ್ರಕಾರದ ಕಲ್ಯಾಣವು ಅಡಗಿದೆ. ಏಕೆ ಹಾಗೂ ಹೇಗೆ ಎನ್ನುವ ಸಂಕಲ್ಪದಿಂದ ನಿಶ್ಚಯ ಬುದ್ಧಿಯ ಆಸ್ತಿಭಾರವನ್ನು ಏಕೆ ಅಲುಗಾಡಿಸುತ್ತೀರಿ? ಒಂದು ವೇಳೆ ಇಂತಹ ಸಣ್ಣ ಸಣ್ಣ ಬಿರುಗಾಳಿಗೆ ತಳಹದಿಯು(ಬುನಾದಿ) ಅಲುಗಾಡಿಬಿಟ್ಟರೆ ಮಾಹಾವಿನಾಶದ ಮಹಾಬಿರುಗಾಳಿಯಲ್ಲಿ ಹೇಗೆ ನಿಲ್ಲಬಲ್ಲಿರಿ? ಇದು ಕೇವಲ ನಿಮ್ಮ ವ್ಯರ್ಥ ಸಂಕಲ್ಪಗಳ ಒಂದು ಬಿರುಗಾಳಿ ಆಗಿದೆ. ಆದರೆ ಮಹಾವಿನಾಶದಲ್ಲಿ ಅನೇಕ ಪ್ರಕಾರದ ನಾಲ್ಕೂ ಕಡೆಯ ಬಿರುಗಾಳಿಗಳು ಬರುವುವು. ಆಗ ಏನು ಮಾಡುವಿರಿ? ಇಷ್ಟು ಸಣ್ಣ ವಿಷಯದಲ್ಲಿ ಇನ್ನೂ ಮುಂದಕ್ಕಾಗಿ ಸಮಯವು ದೊರೆತಿದೆ, ಜೊತೆಯು ದೊರೆತಿದೆ. ಅನೇಕ ಪ್ರಕಾರದ ಖಜಾನೆಗಳು ದೊರೆಯುತ್ತಾ ಇವೆ. ಮತ್ತೆ ಪ್ರಾಪ್ತಿ ಆಗುತ್ತಾ ಇದ್ದರೂ ಸಮಾಪ್ತಿ ಆಗಲಿ ಎನ್ನುವ ತೀವ್ರ ಇಚ್ಛೆಯನ್ನು ಏಕೆ ಇಟ್ಟುಕೊಳ್ಳುತ್ತೀರಿ? ಸುಖದ ದಿನಗಳಲ್ಲಿ ಧೈರ್ಯವನ್ನು ತಾಳಿರಿ. ಯಾವಾಗಲೂ ಏಕೆ ಎನ್ನುವ ಅಧೈರ್ಯದಲ್ಲಿ ಬರಬೇಡಿರಿ. ನಿಮ್ಮದೇ ಆದ ವ್ಯರ್ಥ ಸಂಕಲ್ಪಗಳನ್ನು ತಡೆ ಮಾಡಿರಿ. ಸದಾ ನಿಶ್ಚಯ ಬುದ್ಧಿಯವರಾಗಿರಿ. ಕಲ್ಯಾಣಕಾರಿ ತಂದೆ ಹಾಗೂ ಕಲ್ಯಾಣ ಸಮಯದ ಲಾಭವನ್ನು ಪ್ರತಿಯೊಂದು ಸೆಕೆಂಡ್ ತೆಗೆದುಕೊಳ್ಳಿ. ಇಲ್ಲವಾದರೆ ಇಂತಹ ಸಂಪತ್ತುಳ್ಳ ಭಾಗ್ಯವುಳ್ಳ ದಿನಗಳು, ಭಾಗ್ಯವಿಧಾತನ ಸಂಗದ ದಿನಗಳು ಮತ್ತೆ ಬರುವುದಿಲ್ಲ. ವಿನಾಶದ ಸಮಯದಲ್ಲಿಯೂ ಸಹ ಈ ಪ್ರಾಪ್ತಿಯ ದಿನಗಳನ್ನು ನೆನೆಸಿಕೊಳ್ಳುವಿರಿ. ಆದ್ದರಿಂದ ನಾಟಕದನುಸಾರವಾಗಿ ಕಲ್ಯಾಣಾರ್ಥವಾಗಿ ಏನು ನಾಟಕದ ದೃಶ್ಯವು ನಡೆಯುತ್ತಾ ಇದೆಯೋ ಅದನ್ನು ತ್ರಿಕಾಲದರ್ಶಿ ಆಗಿ ಧೈರ್ಯ ಹಾಗೂ ಉಲ್ಲಾಸವುಳ್ಳ ಸಮರ್ಥ ಆತ್ಮರಾಗಿ. ಸ್ವಯಂ ನೀವೂ ಸಮರ್ಥರಾಗಿರಿ ಹಾಗೂ ವಿಶ್ವವನ್ನೂ ಸಮರ್ಥ ಮಾಡಿರಿ. ಬಂಡೆಯನ್ನು ಒಡೆಯುವುದರಲ್ಲಿ ಆಯಾಸಗೊಳ್ಳಬೇಡಿರಿ. ಸ್ವಯಂ ನಿಮ್ಮ ಬಿರುಗಾಳಿಗಳಲ್ಲಿ ಅಲುಗಾಡಬೇಡಿರಿ, ಅಚಲರಾಗಿರಿ. ಏನು ಮಾಡಬೇಕು, ಆದರೆ ಏನು ಮಾಡುತ್ತಿದ್ದೀರಿ ಎನ್ನುವುದು ಗೊತ್ತಾಯಿತೇ. ಇದೇ ಆತ್ಮಿಕ ಸಂಭಾಷಣೆಯು ಬಾಪ್ ದಾದಾರವರಲ್ಲಿ ಮಕ್ಕಳು ಏನು ಆಟವಾಡುತ್ತೀರಿ ಎನ್ನುವುದರ ಬಗ್ಗೆ ನಡೆಯಿತು. ಈಗ ಸಾಮರ್ಥ್ಯದ ಆಟ ಆಡಿರಿ. ಅದರಿಂದ ಈ ಎಲ್ಲಾ ಆಟಗಳೂ ಕೊನೆ ಆಗಿಬಿಡುವುವು. ನಿರಾಶೆಗೆ ಬದಲಾಗಿ ಮನಸ್ಸು ಸದಾ ಸಂತೋಷದಿಂದ ಇರಬೇಕು. ಈಗ ಇಂತಹ ಸಂಕಲ್ಪವನ್ನು ಈ ಮಹಾಯುದ್ಧದಲ್ಲಿ ಆಹುತಿಕೊಟ್ಟು ಹೋಗಬೇಕು. ಜೊತೆಯಲ್ಲಿ ತೆಗೆದುಕೊಂಡು ಹೋಗ ಬೇಡಿರಿ. ಚಿರಕಾಲದವರೆಗೆ ಸ್ವಾಹಾ ಮಾಡಬೇಕು. ಸ್ವಯಂ ನೀವೇ ಸ್ವಾಹ ಆಗಿರುವಾಗ ಈ ಸಂಕಲ್ಪವು ಹೇಗೆ ಬರಲು ಸಾಧ್ಯವಿದೆ. ಆದ್ದರಿಂದ ಸ್ವಾಹಾದ ಭೋಗವನ್ನು ಇಟ್ಟುಹೋಗಿರಿ. ಯಾವ ಪದಾರ್ಥಗಳನ್ನು ಭೋಗ ಇಡುವುದು, ಸಮರ್ಥ ಸಂಕಲ್ಪಗಳು ಎನ್ನುವ ಫಲಗಳ ಭೋಗವನ್ನು ಇಡಿ. ಈಗ ಎಂತಹ ಭೋಗವನ್ನು ಇಡಬೇಕೆನ್ನುವುದು ಗೊತ್ತಾಯಿತೇ.

**ಇಂತಹ ಸದಾ ನಿಶ್ಚಿತ, ಸದಾ ನಿಶ್ಚಯ ಬುದ್ಧಿ, ಪ್ರತಿಯೊಂದು ಮಾಹಾ ವಾಕ್ಯದ ಶ್ರೇಷ್ಠ ಅರ್ಥವನ್ನು ತಿಳಿದುಕೊಳ್ಳುವವರು, ಸಂಕಲ್ಪಕ್ಕೂ ನಿಮಿತ್ತರಾಗಿರುವವರು ಎಂದರೆ ತಂದೆಯ ಸಂಕಲ್ಪ ಏನಾಗಿದೆಯೋ ಅದು ಮಕ್ಕಳ ಸಂಕಲ್ಪವಾಗಿರುವ ಇಂತಹ ಮನಸ್ಸು, ಬುದ್ಧಿ, ಸಂಸ್ಕಾರದಲ್ಲಿ ಸಮಾನ ಆಗಿರುವ ಬಾಪ್‌ದಾದಾರವರ ಸಮೀಪ ಆತ್ಮರಿಗೆ ಬಾಪ್ ದಾದಾರವರ ನೆನಪು, ಪ್ರೀತಿ ಹಾಗೂ ನಮಸ್ತೆ.**

**ವೈಯುಕ್ತಿಕ ಸಂದರ್ಶನ (ಪ್ರಶೋತ್ತರ):**

ಪ್ರಶ್ನೆ: ಸಾಕಾರ ತಂದೆಯ ಯಾವ ವಿಶೇಷತೆಯನ್ನು ಅನುಸರಿಸು ವುದರಿಂದ ಮೊದಲನೆಯ ಸ್ಥಾನವನ್ನು ಗಳಿಸಬಹುದು?

ಉತ್ತರ: ಸಾಕಾರ ತಂದೆಯ ಮೊದಲನೆಯ ವಿಶೇಷತೆಯು ಸರ್ವಸ್ವತ್ಯಾಗಿ ಆಗಿದೆ. ಈ ವಿಶೇಷತೆಯ ಕಾರಣದಿಂದಲೇ ಅವರು ಮಾಲೆಯ ಮೊದಲನೆಯ ಮಣಿ ಆದರು. ಹಾಗೆಯೇ ತಂದೆಯ ಸಮಾನವಾಗಿ ಈ ವಿಶೇಷತೆಯನ್ನು ಅನುಸರಿಸಿದರೆ ನೀವೂ ಪ್ರಥಮ ಮಣಿ ಆಗಬಹುದು. ಕೇವಲ ಸಂಬಂಧಗಳ ತ್ಯಾಗವಷ್ಟೇ ಅಲ್ಲ, ಸರ್ವಪ್ರಕಾರ ತ್ಯಾಗವನ್ನೂ ಮಾಡಬೇಕು. ವರ್ತಮಾನ ಸಮಯದಲ್ಲಿ ತ್ಯಾಗಮೂರ್ತಿ ಆಗುವವರೇ ಭವಿಷ್ಯದಲ್ಲಿ ಭಾಗ್ಯಶಾಲೀಮೂರ್ತಿ ಆಗುವಿರಿ. ತ್ಯಾಗದಲ್ಲಿಯೇ ಆನಂದ ಇದೆ, ತ್ಯಾಗದಲ್ಲಿಯೇ ಹಗುರತೆ ಇದೆ, ತ್ಯಾಗೀ ಆತ್ಮನ ಪ್ರತಿಯೊಂದು ಹೆಜ್ಜೆಯಲ್ಲಿ ಸಫಲತೆಯು ಕಾಲಿಗೆ ಬೀಳುತ್ತದೆ.

ಪ್ರಶ್ನೆ: ಸೇವೆಯ ಪ್ರತ್ಯಕ್ಷಫಲವು ಏನಾಗಿದೆ?

ಉತ್ತರ: ಸೇವೆಯ ಪ್ರತ್ಯಕ್ಷ ಫಲವಾಗಿ ಸದಾ ನಿಶ್ಚಿಂತ ಆಗುವಿರಿ ಹಾಗೂ ಸದಾ ಆನಂದವು ದೊರೆಯುವುದು. ನಿಶ್ಚಿಂತರಾಗುವುದೇ ಸಫಲತೆಯ ಕುರುಹಾಗಿದೆ. ಯಾರು ತಂದೆಯ ನೆನಪು ಹಾಗೂ ಸೇವೆಯಲ್ಲಿ ತತ್ಪರರಾಗಿರುತ್ತೀರೋ ಅವರಿಗೆ ವಿಜಯವು ನಮ್ಮ ಜನ್ಮಸಿದ್ಧ ಅಧಿಕಾರ ಆಗಿದೆ ಎನ್ನುವ ನಿಶ್ಚಯ ಇರುವುದು.

ಪ್ರಶ್ನೆ: ಯಾವ ಆಟವನ್ನು ಸಮಾಪ್ತಿ ಮಾಡುವವರು ನಾಯಕ ಪಾತ್ರಧಾರಿ ಆಗಿ ಬಿಡುವರು?

ಉತ್ತರ: ಈಗ ತಾನೇ ಅಧಿಕಾರಿ ಹಾಗೂ ಇದೀಗಲೇ ಅಧೀನ ಆಗುವ ಆಟವು ಏನು ನಡೆಯುತ್ತಿದೆಯೋ ಅದನ್ನು ಕೊನೆ ಮಾಡಿಬಿಡಿ, ಇದು ಬಾಲ್ಯದ ಆಟ ಆಗಿದೆ. ಇದು ಸಮಾಪ್ತಿಯಾದಾಗಲೇ ನಾಯಕ ಪಾತ್ರಧಾರಿ ಆಗುವಿರಿ. ಈಗ ನಿಮ್ಮ ಪ್ರಜೆಗಳದೂ ಸಹ ಇಂತಹ ಆಟ ನಡೆಯಬಾರದು. ಮೊದಲನೆಯ ಜನ್ಮದ ಪ್ರಜೆಯೂ ಸಹ ತನ್ನ ಅಧಿಕಾರದಲ್ಲಿ ಇರುವವನು ಆಗಿರುವನು. ಅಲ್ಲದೆ ನೀವಂತೂ ರಾಜರಾಗುವವರಾಗಿದ್ದೀರಿ. ಆದ್ದರಿಂದ ನೀವು ಅಧೀನರಾಗಿರುವುದು ಹೇಗೆ ಸಾಧ್ಯವಿದೆ. ಯಾರು ಈಗ ಸ್ವರಾಜ್ಯದ ಅಧಿಕಾರಿ ಆಗುವಿರೋ ಅವರೇ ವಿಶ್ವರಾಜ್ಯದ ಅಧಿಕಾರಿ ಆಗಬಲ್ಲಿರಿ. ಈಗಿನ ಸ್ವರಾಜ್ಯವು ವಿಶ್ವದ ರಾಜ್ಯಕ್ಕಿಂತಲೂ ಶ್ರೇಷ್ಠವಾಗಿದೆ. ಏಕೆಂದರೆ ಈಗ ಮಾತ್ರ ಅಧೀನತೆ ಹಾಗು ಅಧಿಕಾರೀತನದ ಅಂತರದ ಜ್ಞಾನ ಇದೆ. ಅಲ್ಲಿ ಈ ಜ್ಞಾನವು ಇರುವುದಿಲ್ಲ. ಒಳ್ಳೆಯದು.

ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 14-12-1978.

***ವಿಘ್ನಗಳಿಂದ ಮುಕ್ತರಾಗುವ ಸಹಜಯುಕ್ತಿ***

ಸದಾ ತಂದೆಯ ಹೃದಯ ಸಿಂಹಾಸನಾಧಿಕಾರಿಗಳು, ಕೊರಳಿನ ಹಾರ, ನಯನ ನಕ್ಷತ್ರ, ಶಿರೋ ಕಿರೀಟವಾಗಿರುವ ಮಕ್ಕಳ ಅದೃಷ್ಟ ಮತ್ತು ಮೌಲ್ಯವನ್ನು ತಿಳಿಸುತ್ತಾ, ಯಾವ ವಿಘ್ನದಿಂದ ಆದರೂ ಒಂದು ಕ್ಷಣದಲ್ಲಿ ಮುಕ್ತಿ ಪಡೆಯಲು ಸ್ವಸ್ವರೂಪ ಅರ್ಥಾತ್ ಆತ್ಮಿಕ ಜ್ಯೋತಿ ಸ್ವರೂಪ ಮತ್ತು ಕರ್ಮದಲ್ಲಿ ನಿಮಿತ್ತ ಭಾವದ ಸ್ವರೂಪ ಈ ಡಬಲ್ ಲೈಟ್ ಸ್ವರೂಪದಿಂದ ಕ್ಷಣದಲ್ಲಿ ನಾವು ವಿಘ್ನವನ್ನು ದಾಟಬಲ್ಲೆವು. ಪುರುಷಾರ್ಥದ ಮಾರ್ಗದಲ್ಲಿ ನಡೆಯುತ್ತಿರುವಾಗ ಬರುವ ಸಣ್ಣ ಸಣ್ಣ ಪರಿಸ್ಥಿತಿಗಳು ಮತ್ತು ವ್ಯರ್ಥ ಸಂಕಲ್ಪಗಳೆಂಬ ಬಿರುಗಾಳಿಯನ್ನು ಸಹಜವಾಗಿ ದಾಟಬಹುದು. ಎಂದು ಹೇಳುತ್ತಾ ಶಿವಪರಮಾತ್ಮ ತಿಳಿಸಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಆನಂದ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಬಾಪ್‌ದಾದಾರವರಿಗೆ ಅತಿ ಪ್ರೀತಿಯ ಮಗು, ಸರ್ವ ಶ್ರೇಷ್ಠ ತಂದೆಯ ಶಿರೋಕಿರೀಟ, ಪದಮಾಪದಂ ಭಾಗ್ಯಶಾಲಿ, ಅಮೂಲ್ಯರತ್ನ, ಕೊರಳಿನ ಹಾರ, ನಯನದ ನಕ್ಷತ್ರ, ಹೃದಯ ಸಿಂಹಾಸನಾಧಿಕಾರಿ, ಪೂಜ್ಯನು, ಇಷ್ಟದೇವತೆ ಎಂಬ ಸ್ವಮಾನದಲ್ಲಿ ಸದಾ ಸ್ಥಿತವಾಗಿ ಇದ್ದೇನೆ.

2. ನಾನು ಆತ್ಮಿಕ ಜ್ಯೋತಿ ಸ್ವರೂಪ ಮತ್ತು ಕರ್ಮದಲ್ಲಿ ನಿಮಿತ್ತ ಭಾವ, - ಈ ಡಬಲ್ ಲೈಟ್ ಸ್ವರೂಪದಿಂದ ಒಂದು ಕ್ಷಣದಲ್ಲಿ ವಿಘ್ನಗಳಿಂದ ಪಾರಾಗಿರುವ ತೀವ್ರ ಪುರುಷಾರ್ಥಿ.

3. ನಾನು ವಜ್ರಸಮಾನವಾದ,  ತಂದೆಯೊಂದಿಗೆ ಮಿಲನ ಮಾಡಿಕೊಳ್ಳುವ, ಉನ್ನತ ಕಲೆಯನ್ನು, ಸರ್ವ ಖಜಾನೆಗಳಿಂದ ಸಂಪನ್ನವಾಗಿರುವ, ಜೀವನವನ್ನು ಕಳೆಯುವ ಬ್ರಾಹ್ಮಣನು.

4. ನಾನು ಸುಖದ ದಿನಗಳು ಬರಲಿವೆ ಎಂದು ಧೈರ್ಯವನ್ನು ವಹಿಸಿರುವ ಸಮರ್ಥ ಸ್ವರೂಪ.

5. ನಾನು ಧನವಂತನಾಗಿ ಸಮರ್ಥವಂತನಾಗಿ ಸದಾ ನಿಶ್ಚಯ ಬುದ್ಧಿಯಿಂದ ಇರುತ್ತಾ ಕಲ್ಯಾಣಕಾರಿ ತಂದೆ ಮತ್ತು ಕಲ್ಯಾಣಕಾರಿ ಸಮಯದ ಲಾಭವನ್ನು ಪ್ರತಿಕ್ಷಣ ಪಡೆದಿದ್ದೇನೆ.

6. ನಾನು ತ್ರಿಕಾಲದರ್ಶಿಯಾಗಿ ಕಲ್ಯಾಣಕಾರಿ ಡ್ರಾಮಾದ ದೃಶ್ಯಗಳನ್ನು ಧೈರ್ಯ ಮತ್ತು ಉತ್ಸಾಹದಿಂದ ನೋಡುತ್ತಾ ಸ್ವಯಂ ಸಮರ್ಥವಾಗಿದ್ದು ವಿಶ್ವವನ್ನು ಸಮರ್ಥವಾಗಿ ಮಾಡಿದ್ದೇನೆ.

7. ನಾನು ಬಲಹೀನ ಸಂಕಲ್ಪಗಳನ್ನು ಈ ಮಹಾ ಯಜ್ಞದಲ್ಲಿ ಸ್ವಾಹ ಮಾಡಿ ಸಮರ್ಥ ಸಂಕಲ್ಪಗಳೆಂಬ ಫಲದ ನೈವೇದ್ಯ (ಭೋಗ) ಇಟ್ಟಿದ್ದೇನೆ.